**ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 4741/2025**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ.01**

**ದಿನಾಂಕಃ** 04.06.2026 **ಸಿಡಬ್ಲ್ಯೂ.01**

| | |
|---|---|
| ಹೆಸರು | ಆರೀಫ್ |
| ತಂದೆ ಹೆಸರು | ಮಹಬೂಬ್ ಸಾಬ್ |
| ವಯಸ್ಸು | 48 ವರ್ಷ |
| ಉದ್ಯೋಗ | ಮೆಕ್ಯಾನಿಕ್ |
| ವಾಸ ಸ್ಥಳ | ತುಮಕೂರು |

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಚಾಸಾ.2 ಮತ್ತು 3 ರವರ ಪರಿಚಯ ಇರುತ್ತದೆ. ದಿಃ24.05.2025 ನಾನು ನನ್ನ ಗ್ಯಾರೇಜ್ ಕೆಲಸವನ್ನು ಮುಗಿಸಿಕೊಂಡು ಮೋಟಾರ್ ಸೈಕಲ್ ನಲ್ಲಿ ಹೋಗುತ್ತಿರುವಾಗ ನನಗೆ ಕುಮಾರ್ ಎನ್ನುವವರು ಫೋನ್ ಮಾಡಿ ನಾನು ನಿಮ್ಮ ಗ್ಯಾರೇಜ್ ಗಾಡಿ ರಿಪೇರಿ ಮಾಡಿಸಿಕೊಳ್ಳಲು ಬಂದಿರುತ್ತೇನೆ ಹಾಗಾಗಿ ಪರಿಚಯ ಆಗಿರುತ್ತೀರ, ನನ್ನ ತಾತನ ಬಳಿ ಬಂಗಾರ ಇದೆ ನಾನು ಕೊಡುತ್ತೇನೆ, ನನ್ನ 3 ಜನ ಹೆಣ್ಣು ಮಕ್ಕಳ ಮದುವೆ ಮಾಡಲು 15 ಲಕ್ಷ ಹಣವನ್ನು ಕೊಡಬೇಕು ಎಂದು ಹೇಳಿರುತ್ತಾರೆ. ಸ್ಯಾಂಪಲ್ ಗೆ ಬನ್ನಿ ಚೆಕ್ ಮಾಡಿಕೊಂಡು ಹೋಗಿ ಎಂದು ಹೇಳಿರುತ್ತಾರೆ. ದಿಃ28.05.2025 ರಂದು ನನಗೆ ನೀಲಗುಂಟ ಕ್ರಾಸ್, ವಿದ್ಯಾನಗರ ಪಬ್ಲಿಕ್ ಶಾಲೆ, ಹರಿಹರ ಬಳಿ ಬರಲು ತಿಳಿಸಿರುತ್ತಾರೆ. ಕುಮಾರನ ಹತ್ತಿರ ಸುಮಾರು ¼ ಕೆಜಿಯಷ್ಟು ಬಂಗಾರ ಇದ್ದು ಅದರಲ್ಲಿ ನನಗೆ 1 ಗ್ರಾಂ ಬಂಗಾರ ಕೊಟ್ಟಿರುತ್ತಾರೆ. ನಾನು ಅದನ್ನು ಚೆಕ್ ಮಾಡಿಸಿದಾಗ ಬಂಗಾರವಾಗಿತ್ತು. ನನಗೆ ಕುಮಾರ 15 ಲಕ್ಷ ಕೇಳಿದ್ದು ನಾನು ನನ್ನ ಬಳಿ 12 ಲಕ್ಷ ಇದೆ ಎಂದು ನಾನು ಕೊಟ್ಟಿರುತ್ತೇನೆ. ನಂತರ ದಿಃ30.05.2025 ರಂದು ಗುತ್ತೂರು ಹತ್ತಿರ ಇರುವ ಇಟ್ಟಿಗೆ ಗುಡಿಗೆ ಕರೆಸಿರುತ್ತಾರೆ. ಅಲ್ಲಿ 12 ಲಕ್ಷ ಹಣ ಪಡೆದುಕೊಂಡು ನನಗೆ ¼ ಕೆಜಿಯಷ್ಟು ಬಂಗಾರವನ್ನು ಕೊಟ್ಟಿರುತ್ತಾರೆ. ನಂತರ ನಾನು ಸದರಿ ಬಂಗಾರವನ್ನು ಚೆಕ್ ಮಾಡಿಸಿದಾಗ ಅದು ನಕಲಿ ಬಂಗಾರವೆಂದು ನನಗೆ ಗೊತ್ತಾಗಿರುತ್ತದೆ. ನಂತರ ನಾನು ದಿಃ02.06.2025 ರಂದು ಠಾಣೆಗೆ ಬಂದು ದೂರು ನೀಡಿರುತ್ತೇನೆ. ನಂತರ ಪೋಲೀಸರಿಗೆ ನಾನು ಸ್ಥಳವನ್ನು ತೋರಿಸಿದ್ದು ಪೋಲೀಸರು ಅಲ್ಲಿ ಮಹಜರ್ ಮಾಡಿರುತ್ತಾರೆ. ಆ ಸಮಯದಲ್ಲಿ ಸುನಿಲ್ ಕುಮಾರ್ ಮತ್ತು ಗಿರೀಶ

ಎನ್ನುವರು ಇದ್ದರು. ನಂತರ ಪೋಲೀಸರು ಅದೇ ದಿನ ಆರೋಪಿಗೆ ಹಣ ಕೊಟ್ಟ ಸ್ಥಳದಲ್ಲಿ ಪಂಚನಾಮೆ ಮಾಡಿರುತ್ತಾರೆ. ನಂತರ ಪೋಲೀಸರು ನನ್ನನ್ನು ಠಾಣೆಗೆ ಕರೆಸಿ ಆರೋಪಿತರು ಸಿಕ್ಕಿದ್ದಾರೆ ಎಂದು ಹೇಳಿ ನನಗೆ 9 ಲಕ್ಷ ಹಣವನ್ನು ಕೊಟ್ಟಿರುತ್ತಾರೆ. ಆ ಸಮಯದಲ್ಲಿ ಆರೋಪಿತರು ಪೋಲೀಸ್ ಠಾಣೆಯಲ್ಲಿ ಇದ್ದರು. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿಪಿ.1 ಎ ಎಂದು, ಸಾಕ್ಷಿಯು ಬಂಗಾರದ ಸ್ಯಾಂಪಲ್ ಕೊಟ್ಟ ಸ್ಥಳದ ಪಂಚನಾಮೆ ನೋಡಿ ಗುರುತಿಸಿದ್ದು ಅದನ್ನು ನಿಪಿ.2 ಎಂದು, ಸಾಕ್ಷಿಯ ಸಹಿಯನ್ನು ನಿಪಿ.2 ಎ, ನಕಲಿ ಬಂಗಾರ ಕೊಟ್ಟ ಸ್ಥಳ ಪಂಚನಾಮೆ ನೋಡಿ ಗುರುತಿಸಿದ್ದು ಅದನ್ನು ನಿಪಿ.3 ಎಂದು, ಸಾಕ್ಷಿಯ ಸಹಿಯನ್ನು ನಿಪಿ.3 ಎ, ಪಂಚನಾಮೆ ಕಾಲಕ್ಕೆ ತೆಗೆದ ಪೋಟೋಗಳು ನಿಪಿ.4 ಮತ್ತು 5 ಎಂದು, ಸಾಕ್ಷಿಯು ಹಣದ ಪೋಟೋವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.6 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ ವಿ ವಕೀಲರಿಂದಃ**

ನಾನು ಸುಮಾರು 20 ವರ್ಷದಿಂದ ಮೆಕ್ಯಾನಿಕ್ ಕೆಲಸ ಮಾಡುತ್ತಿದ್ದೇನೆ. ನಾನು 8 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಮನೆ ಹಾಗೂ ಅಂಗಡಿ 15 ಕಿಮೀ ಅಂತರ ಇದೆ. ನಮ್ಮ ಗ್ಯಾರೇಜನ ಪಕ್ಕದಲ್ಲಿ ಇನ್ನೊಂದು ಗ್ಯಾರೇಜ್ ಇರುತ್ತದೆ. ಆ ಗ್ಯಾರೇಜನ ಮಾಲೀಕನ ಹೆಸರು ಮುಬಾರಕ್ ಅಂತ ಇರುತ್ತದೆ. ಈ ವ್ಯವಹಾರದ ಬಗ್ಗೆ ಮುಬಾರಕನಿಗೆ ಗೊತ್ತಿರುವುದಿಲ್ಲ. ನನಗೆ ಕನ್ನಡ ಬರೆಯಲು ಮತ್ತು ಓದಲು ಬರುವುದಿಲ್ಲ. ನಾನು ದೂರನ್ನು ಠಾಣೆಯಲ್ಲಿ ಟೈಪ್ ಮಾಡಿಸಿರುತ್ತೇನೆ. ದೂರನ್ನು ನೀಡುವಾಗ ಪೋಲೀಸರನ್ನು ಹೊರತು ಪಡಿಸಿ ನನ್ನ ಹೆಂಡತಿ ಇದ್ದಳು. ದೂರನ್ನು ನಾಗರಾಜ ಎನ್ನುವವರು ಟೈಪ್ ಮಾಡಿರುತ್ತಾರೆ. ಗ್ಯಾರೇಜ್ ಕೆಲಸ ಮುಗಿಸಿ ನಾನು ಆ ದಿನ ಸಂಜೆ 7.30 ಗಂಟೆಗೆ ಮನೆಗೆ ಹೊರಟಿದ್ದೆನು. ನಾನು ಫೋನ್ ಮಾಡಿದಾಗ ವ್ಯವಹಾರದ ವಿಷಯವನ್ನು ನಾನು ಮಾತನಾಡಿಲ್ಲ. ಮೊದಲನೇ ಬಾರಿಗೆ ಆರೋಪಿತರು ನನ್ನ ತಾತನ ಬಳಿ ಬಂಗಾರ ಇದೆ ಎಂದು ಹೇಳಿರುವುದಿಲ್ಲ. ಆರೋಪಿತರು ನನಗೆ ಆ ಸಮಯದಲ್ಲಿ ಮತ್ತೊಮ್ಮೆ ಫೋನ್ ಮಾಡಲು ಹೇಳಿರುವುದಿಲ್ಲ. ನಾನಾಗಿಯೇ ರಾತ್ರಿ 8.30 ಗಂಟೆಗೆ ಆರೋಪಿತರಿಗೆ ಫೋನ್ ಮಾಡಿರುತ್ತೇನೆ. ನಾನು ಫೋನ್ ಮಾಡಿದಾಗ ನಾನು ಮತ್ತು ನನ್ನ ಹೆಂಡತಿ ಮನೆಯಲ್ಲಿದ್ದೆವು. ಆರೋಪಿತರು ಆ ದಿನ ನನ್ನ ತಾತನ ಬಂಗಾರ ಇದೆ ನನಗೆ ಹಣ ಬೇಕು ಎಂದು ಹೇಳಿರುತ್ತಾರೆ. ದಿಃ24.05.2025 ರಂದು ಮಧ್ಯಾಹ್ನ 2 ಗಂಟೆಗೆ ಫೋನ್ ಮಾಡಿರುತ್ತಾರೆ. ನಾನು ಮೊದಲನೇ ಬಾರಿಗೆ ಬಂದ ಫೋನ್ ಕರೆ ದಿಃ27.05.2025 ರಂದು ಬಂದ ಕರೆ ಎಂದು ದೂರಿನಲ್ಲಿ ತಿಳಿಸಿರುವುದಿಲ್ಲ. ನಾನು ಬಂದ ಕರೆಯ ವಾಯ್ಸ್ ರೆಕಾರ್ಡ್ ಮಾಡಿರುವುದಿಲ್ಲ. ಆ ದಿನ ಈ ಹಿಂದೆ ಹೇಳಿದ ವಿಷಯವನ್ನೇ ನನಗೆ ಮತ್ತೆ ಹೇಳಿರುತ್ತಾರೆ. ನನಗೆ ದಿಃ27.05.2025 ರಂದು ಆರೋಪಿತರು ಬರುವ ಸ್ಥಳದ ಬಗ್ಗೆ ತಿಳಿಸಿರುತ್ತಾರೆ. ನಾನು ಈ ಹಿಂದೆ ಹರಿಹರಕ್ಕೆ ಬಂದಿರುವುದಿಲ್ಲ, ಅದೇ ಮೊದಲ ಬಾರಿಗೆ ನಾನು ಹರಿಹರಕ್ಕೆ ಬಂದಿರುತ್ತೇನೆ. ನಾನು ಆ 4 ದಿನದ ಅವಧಿಯಲ್ಲಿ ಆ ವಿಷಯ ನಿಜವೋ ಸುಳ್ಳೋ ಎಂಬುದರ ಬಗ್ಗೆ ತಿಳಿದುಕೊಳ್ಳುವ ಪ್ರಯತ್ನ

ಮಾಡಿರುವುದಿಲ್ಲ ಹಾಗೂ ಪೋಲೀಸರಿಗೆ ದೂರು ನೀಡುವ ಪ್ರಯತ್ನ ಮಾಡಿರುವುದಿಲ್ಲ. ನಾನು ಮೊದಲ ಬಾರಿಗೆ ದಿಃ28.05.2025 ರಂದು ನೀಲಕುಂಟೆ ಕ್ರಾಸ್ ಹರಿಹರಕ್ಕೆ ಬಂದಿರುತ್ತೇನೆ. ಆರೋಪಿತರು ನನಗೆ ಸ್ಥಳದ ಬಗ್ಗೆ ನಕಾಶೆಯನ್ನು ಫೋನ್ ನಲ್ಲಿ ಕಳಿಸಿರುವುದಿಲ್ಲ. ಆ ದಿನ ನಾನು, ನನ್ನ ಹೆಂಡತಿ ಹಾಗೂ ನನ್ನ ಮಗ ಬಂದಿರುತ್ತೇವೆ. ನನಗೆ ಆ ದಿನ ಸ್ಯಾಂಪಲ್ಗಳನ್ನು ಕುಮಾರ ಕೊಟ್ಟಿರುತ್ತಾನೆ. ನನಗೆ ಆ ಸ್ಥಳದ ಚೆಕ್ ಬಂದಿ ಹೇಳಲು ಬರುವುದಿಲ್ಲ. ನಾನು ಬಂಗಾರವನ್ನು ಮಲಬಾರ್ ಗೋಲ್ಡ್ , ತುಮಕೂರಿನಲ್ಲಿ ಚೆಕ್ ಮಾಡಿಸಿರುತ್ತೇನೆ. ಆ ದಿನ ನಾನು, ನನ್ನ ಹೆಂಡತಿ ಹೋಗಿರುತ್ತೇವೆ. ನನಗೆ ಮೊದಲನೇ ಬಾರಿಗೆ 1 ಗ್ರಾಂ ಬಂಗಾರ ಕೊಟ್ಟಿರುತ್ತಾರೆ. ಬಂಗಾರವನ್ನು ಚೆಕ್ ಮಾಡಿಸಿದ ಬಗ್ಗೆ ಯಾವುದೇ ರಸೀದಿಯನ್ನು ನಾನು ಪಡೆದಿರುವುದಿಲ್ಲ. ನಂತರ ದಿಃ28.05.2025 ರಂದು ಆರೋಪಿತರು ನನಗೆ ಫೋನ್ ಮಾಡಿರುತ್ತಾರೆ. ಆ ದಿನ ಅದೇ ನಂಬರಿನಿಂದ ನನಗೆ ಫೋನ್ ಕರೆ ಬಂದಿರುತ್ತದೆ. ನಾನು ನನ್ನ ದೂರಿನಲ್ಲಿ ನನ್ನ ಹಾಗೂ ಆರೋಪಿತರ ಫೋನ್ ನಂಬರ್ ತಿಳಿಸಿರುತ್ತೇನೆ. ನಾನು ಆರೋಪಿತರಿಗೆ ಯಾವ ತಾರೀಖಿಗೆ ಬರುತ್ತೇನೆ ಎಂದು ಹೇಳಿರುವುದಿಲ್ಲ. ನಾನು ಆರೋಪಿತರಿಗೆ ಸಂಜೆ 7.30 ಗಂಟೆಗೆ ದಿಃ29.05.2025 ರಂದು ಹರಿಹರಕ್ಕೆ ಬರುವುದಾಗಿ ತಿಳಿಸಿರುತ್ತೇನೆ. ನಾನು ಎರಡನೇ ಬಾರಿಗೆ ನಾನು, ನನ್ನ ಹೆಂಡತಿ ಹಾಗೂ ಮಗನೊಂದಿಗೆ ಹರಿಹರಕ್ಕೆ ಬಂದಿರುತ್ತೇವೆ. ನಾನು ಎರಡನೇ ಬಾರಿಗೆ ನನ್ನ ಹೆಂಡತಿ ಮತ್ತು ನನ್ನ ಮಗನೊಂದಿಗೆ ಹರಿಹರಕ್ಕೆ ಬಂದ ವಿಷಯವನ್ನು ತಿಳಿಸಿರುತ್ತೇನೆ. ನಾನು 20 ಲಕ್ಷಕ್ಕೆ ಎಷ್ಟು ಬಂಗಾರ ಬರುತ್ತದೆ ಎಂದು ವಿಚಾರಣೆ ಮಾಡಿಲ್ಲ. ನಾನು ಎಷ್ಟು ಮುಖಬೆಲೆಯ ಹಣವನ್ನು ಯಾವುದರಲ್ಲಿ ತೆಗೆದುಕೊಂಡು ಹೋಗಿರುತ್ತೇನೆ ಎಂದು ದೂರಿನಲ್ಲಿ ತಿಳಿಸಿರುತ್ತೇನೆ. ನನಗೆ ಎರಡೂ ಸ್ಥಳದ ಚೆಕ್ ಬಂದಿ ಹೇಳಲು ಬರುವುದಿಲ್ಲ. ನನಗೆ ದಿಃ29.05.2025 ಹಾಗೂ 30.05.2025 ರಂದು ಪೋಲೀಸರನ್ನು ಕರೆದುಕೊಂಡು ಹೋಗಲು ತೊಂದರೆ ಇರಲಿಲ್ಲ. ಆರೋಪಿತರು ನನಗೆ ಆ ದಿನ ಅವರೇ ಕರೆದುಕೊಂಡು ಹೋಗಿರುವುದಿಲ್ಲ ಫೋನ್ ಮಾಡಿ ಸ್ಥಳಕ್ಕೆ ಬರಲು ತಿಳಿಸಿರುತ್ತಾರೆ. ನಾನು ನನ್ನ ದೂರಿನಲ್ಲಿ ಆರೋಪಿತರ ದೇಹದ ಆಕಾರದ ಬಗ್ಗೆ ತಿಳಿಸಿರುವುದಿಲ್ಲ. ಆರೋಪಿತರು ಆ ದಿನ ಯಾವ ಬಟ್ಟೆ ಧರಿಸಿರುತ್ತಾರೆ ಎಂದು ದೂರಿನಲ್ಲಿ ತಿಳಿಸಿರುವುದಿಲ್ಲ. ನನಗೆ ಬಂಗಾರವನ್ನು ಒಂದು ಬಟ್ಟೆಯಲ್ಲಿ ಕೊಟ್ಟಿದ್ದರು ಅದನ್ನು ನಾನು ತೆಗೆದು ನೋಡಲು ಯಾವುದೇ ತೊಂದರೆ ಇರಲಿಲ್ಲ. ನಾನು ಈ ವಿಷಯವನ್ನು ಯಾವುದೇ ಅಕ್ಕಪಕ್ಕದವರಿಗೆ ಹಾಗೂ ಸಂಬಂಧಿಕರಿಗೆ ತಿಳಿಸಿರುವುದಿಲ್ಲ. ನಾನು ದೂರು ಕೊಟ್ಟಾಗ ಪೋಲೀಸರು ನನ್ನಿಂದ ಬಂಗಾರವನ್ನು ತೆಗೆದುಕೊಂಡಿರುತ್ತಾರೆ.

**ಮುಂದುವರೆದ ಪಾಟೀಸವಾಲಿಗೆ ಸಮಯಾವಕಾಶ ಕೇಳಿದ್ದರಿಂದ ಸಮಯಾವಕಾಶ ನೀಡಲಾಯಿತು.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

sd/

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹರಿಹರ